ಪ್ರಕೃತಿ ವಿಕೋಪ ಸಂಭವಿಸಿ ಇನ್ನೂ ಒಂದು ತಿಂಗಳು ಕೂಡಾ ಆಗಿಲ್ಲ.... ಮನದಂಗಳದಲ್ಲಿ ಹಸಿಯಾಗಿಯೇ ಇದ್ದ ಆ ಭಯಾನಕ ಘಟನೆಗಳು ಆಗಾಗ ರಿಂಗಣ ಕುಣಿದು ಚಿತ್ತವನ್ನೇ ಕಲಕುತ್ತಿವೆ..

ಜಿತೇಂದ್ರ ಮಲಗಿದಲ್ಲೇ ಹೊರಳಾಡಿದ. ಎದ್ದು ಫ್ರಿಡ್ಜ್‌ನಿಂದ ತಣ್ಣನೆಯ ನೀರು ತೆಗೆದು ಕುಡಿದ.

'ನಿದ್ದೆ ಬರ್ತಿಲ್ವೆ ಜಿತೂ?' ಚೈತಾಲಿ ಪ್ರಶ್ನಿಸಿದಳು.

'ಹೂಂ.. ನಂಗೆ ಮಾತ್ರ ಅಲ್ಲ, ನಿಂಗೂ ಬರ್ತಿಲ್ಲ ಅಲ್ವೇ?'

'ಹೌದು ಜಿತು, ಹಾಗಿದೆ ವಾತಾವರಣ. ನಾವಿಲ್ಲಿ ಬರುವ ಮುನ್ನ ಹ್ಯೂಸ್ಟನ್ನಿನಲ್ಲೇ ನಡೆದುದೇ ಮರೆಯೋಕಾಗ್ತಿಲ್ಲ. ಏನು ನಾವು ಹೋದಲ್ಲೆಲ್ಲಾ ಇಂಥ ಸುದ್ದಿಗಳೇ ಸಿಗಬೇಕೇ?'

'ಹಾಗೇಕಂತೀಯಾ ಚೈತಾಲಿ? ನಾವು ಕಾರಣರಲ್ಲ ಇದಕ್ಕೆ. ಎಲ್ಲವೂ ವಿಧಿಲೀಲೆ.'

'ಸರಿ ಮಲ್ಕೊಳ್ಳಿ. ನಾಳೆ ಬೆಳಗ್ಗೆ ಹೊರಡಬೇಕಲ್ಲ'

'ಹೂಂ. ಪ್ರಯತ್ನಿಸ್ತೀನಿ' ಜಿತೇಂದ್ರ ಮುಸುಕೆಳೆದುಕೊಂಡ.

ಜಿತೇಂದ್ರ ಮತ್ತು ಚೈತಾಲಿ ಇಬ್ಬರೂ ದಂತ ವೈದ್ಯರು. ಟೆಕ್ಸಾಸ್ ಪ್ರಾಂತ್ಯದ ಹ್ಯೂಸ್ಟನ್ ನಗರದಲ್ಲಿ ಅವರಿಬ್ಬರೂ ಸೇರಿ ನಡೆಸುತ್ತಿದ್ದ ದಂತ ಚಿಕಿತ್ಸಾಲಯ ತುಂಬಾ ಖ್ಯಾತಿ ಪಡೆದಿತ್ತು. ಹತ್ತು ವರ್ಷಗಳಿಂದ ಹ್ಯೂಸ್ಟನ್‌ನಲ್ಲೇವ ನೆಲೆಸಿದ್ದ ಅವರು ಚಿಕಿತ್ಸಾಲಯಕ್ಕೆ ಹತ್ತಿರವೇ ದೊಡ್ಡದಾದ ಬಂಗಲೆ ಖರೀದಿಸಿದ್ದರು. ಉತ್ತಮ ಮಟ್ಟದ ಪೀಠೋಪಕರಣಗಳು ಮನೆಯನ್ನಲಂಕರಿಸಿದ್ದವು. ಸ್ವಂತ ಮನೆ, ಆಸ್ಪತ್ರೆ, ಧಾರಾಳ ಸಂಪಾದನೆ ಎಲ್ಲವೂ ಇದ್ದು ಆರಾಮವಾಗಿ ಜೀವನ ನಡೆಸುತ್ತಿದ್ದ ದಂಪತಿಗಳನ್ನು ಕಾಡುತ್ತಿದ್ದ ಏಕೈಕ ಕೊರಗು ಇನ್ನೂ ಮಕ್ಕಳಾಗಿಲ್ಲ ಎಂಬುದು.

ಇದ್ದಕ್ಕಿದ್ದಂತೇ ಹ್ಯೂಸ್ಟನ್ ಕರಾವಳಿಗೆ ಅಪ್ಪಳಿಸಿದ 'ಹಾರ್ವೇ' ಎಂಬ ಚಂಡಮಾರುತ ನಗರವನ್ನು ಅಸ್ತವ್ಯಸ್ತಗೊಳಿಸಿತ್ತು. ಅದು ಆಗಸ್ಟ್ ತಿಂಗಳ 25ನೇ ತಾರೀಕು. ಅದಕ್ಕೆ ಒಂದು ವಾರ ಮುನ್ನವೇ ಪ್ರಬಲವಾದ ಮೇಲ್ಮೈಗಾಳಿ ಹಾಗೂ ಬಿರುಸಿನ ಮಳೆ ಪ್ರಾರಂಭವಾಗಿತ್ತು. ಅದರ ಪರಿಣಾಮವಾಗಿ ಉಕ್ಕಿ ಬಂದ ಮೆಕ್ಸಿಕನ್ ಕೊಲ್ಲಿ, ಕರಾವಳಿಯ ಭೂಭಾಗವನ್ನು ಕಬಳಿಸಿ ನಗರವನ್ನು ಜಲಾವೃತಗೊಳಿಸಿತ್ತು. ಹವಾ ಮುನ್ಸೂಚನೆ ಪ್ರಕಟಪಡಿಸುತ್ತಲೇ ಇದ್ದ ಸರಕಾರ ಮನೆ ಕಳಕೊಳ್ಳುವ ನಿರಾಶ್ರಿತರಿಗೋಸ್ಕರ ಎತ್ತರ ಪ್ರದೇಶಗಳಲ್ಲಿ, ಸಭಾಭವನಗಳಲ್ಲಿ, ಚಿತ್ರಮಂದಿರಗಳಲ್ಲಿ ತಾತ್ಕಾಲಿಕ ವಸತಿಯ ಏರ್ಪಾಡು ಮಾಡಿತ್ತು. ಎಷ್ಟೋ ಜನ ತಂಡೋಪತಂಡವಾಗಿ ಅಮೇರಿಕದ ಇತರ ಭಾಗಗಳಿಗೆ ವಲಸೆ ಹೋಗಿದ್ದರು. ವಲಸೆ ಹೋಗುವುದೆಂದರೆ ಸಾಮಾನ್ಯ ಕೆಲಸವೇ? ಬೆಲೆಬಾಳುವ ಹಾಗೂ ಅತ್ಯವಶ್ಯಕವಾದ ಸಾಮಾನುಗಳನ್ನು ಕಾರುಗಳಲ್ಲೋ, ಟ್ರಕ್ಕುಗಳಲ್ಲೋ ತುಂಬಿಸಿ ಬೇರೆಡೆ ಹೋಗುವುದರಿಂದಾಗಿ ಹ್ಯೂಸ್ಟನ್ ನಗರಕ್ಕೆ ಬರುವ ಹೋಗುವ ರಸ್ತೆಗಳಲ್ಲೆಲ್ಲಾ ವಾಹನದಟ್ಟಣೆ ಜೋರಾಗಿತ್ತು. ಹಾಗೆ ವಲಸೆ ಹೋದವರಲ್ಲಿ ಜಿತೇಂದ್ರ ಮತ್ತು ಚೈತಾಲಿಯೂ ಇದ್ದರು. ಇತರರಂತೆ ಇವರಿಗೆ ಬೇರೆ ಎಲ್ಲೋ ಅಪರಿಚಿತ ಜಾಗಕ್ಕೆ ಹೋಗಬೇಕಾದ ಪ್ರಮೇಯ ಬರಲಿಲ್ಲ. ಗೆಳೆಯ ವಿಕ್ರಮ್ ಇವರನ್ನು ತನ್ನ ಮನೆಗೆ ಆಹ್ವಾನಿಸಿದ್ದ. ವಿಕ್ರಮ್ ಮತ್ತು ಶ್ವೇತಾ ಜತೆ ಇಬ್ಬರೂ ಮನೆಯವರಂತೆಯೇ ಬೆರೆತುಕೊಂಡಿರುವರು.

ಹಾರ್ವೇಯಿಂದಾಗಿ ಸಂಭವಿಸಿದ ಕಷ್ಟನಷ್ಟ ಸಾವು ನೋವುಗಳಲ್ಲಿ ಹ್ಯೂಸ್ಟನ್ ಜನ ಸಂತ್ರಸ್ತರಾಗಿರುವಾಗಲೇ ಅರ್ಮಾ' ಎಂಬ ಚಂಡಮಾರುತ ಫ್ಲಾರಿಡಾ ಕರಾವಳಿಯನ್ನಪ್ಪಳಿಸಿತು. ಮತ್ತೆ ಕೆಲವೇ ದಿನಗಳಲ್ಲಿ ಕೆರೀಬಿಯನ್ ದ್ವೀಪಗಳು 'ಮರಿಯಾ' ಎಂಬ ಸುಂಟರಗಾಳಿಯಲ್ಲಿ ನಲುಗಿದುವು. ಕೇವಲ ಹದಿನೈದು ದಿವಸಗಳೊಳಗೆ ಅಮೇರಿಕದ ಹಲವಾರು ಕರಾವಳಿ ಪ್ರದೇಶಗಳು ಧ್ವಂಸಗೊಳಿಸಲ್ಪಟ್ಟಿದ್ದು ಪ್ರಪಂಚದೆಲ್ಲೆಡೆ ಜನ ಆತಂಕಕ್ಕೊಳಗಾಗಿದ್ದರು. ಜಿತೇಂದ್ರ ಚೈತಾಲಿಯರ ಮನೆ ಮತ್ತು ಚಿಕಿತ್ಸಾಲಯ ಎರಡೂ ಹಾರ್ವೇಯ ಹೊಡೆತದಿಂದ ಹಾನಿಗೊಳಗಾಗಿದ್ದುವು. ದೂರದ ಊರಿಂದ ಬಂಧುಗಳ ದೂರವಾಣಿ ಕರೆಗಳು ಬರುತ್ತಲೇ ಇದ್ದುವು.

'ಅಲ್ಲಿನ ಪರಿಸ್ಥಿತಿ ಶಾಂತವಾಗುವ ವರೆಗೂ ನೀನಿಲ್ಲೇ ಇರತಕ್ಕದ್ದು' ವಿಕ್ರಮ್ ತಾಕೀತು ಮಾಡಿದ್ದ. ಇನ್ನೆಷ್ಟು ದಿನ ಹೀಗೇ ಇರಬೇಕೋ ತಿಳಿಯದು.... ಚಿಂತೆಯಲ್ಲಿದ್ದವನಿಗೆ ಎಷ್ಟೋ ಹೊತ್ತಿನ ಬಳಿಕ ಕಣ್ಣೆವೆಗಳು ಕೂಡಿಕೊಂಡವು.

ಮರುದಿನ ಬೆಳಗ್ಗಿನ ಜಾವವೇ ಜಿತೇಂದ್ರ ಮೆಕ್ಸಿಕೋ ನಗರಕ್ಕೆ ಪಯಣಿಸಿದ. ಅಲ್ಲಿನ ಸರಕಾರ ಪರಿಹಾರ ಕಾರ್ಯಗಳನ್ನು ಆರಂಭಿಸಿತ್ತು. ಇತರ ರಾಷ್ಟ್ರಗಳೂ ಸಹಾಯ ಘೋಷಿಸಿದ್ದುವು. ಸ್ವಯಂಸೇವಕರ ದಂಡೇ ಹರಿದು ಬಂದಿತ್ತು. ಕುಸಿದುಬಿದ್ದ ಕಟ್ಟಡಗಳ ಅಡಿಯಲ್ಲಿ ಸಿಲುಕಿಬಿದ್ದ ಜನರನ್ನು ಹೊರತೆಗೆಯುವ ಕಾರ್ಯ ಸಮರೋಪಾದಿಯಲ್ಲಿ ನಡೆಯುತ್ತಿತ್ತು. ಹಾಗೆ ದೊರಕಿದುದೆಲ್ಲಾ ನಜ್ಜುಗುಜ್ಜಾದ ಶವಗಳೇ. ಸ್ವಯಂಸೇವಕರ ಕೆಲಸದಲ್ಲಿ ಜಿತೇಂದ್ರ ಕೈಜೋಡಿಸಿದ.

ಬೃಹತ್ ಕ್ರೇನುಗಳು ಹಾಗೂ ಟ್ರಕ್ಕುಗಳು ಅಲ್ಲಿ ಕಾರ್ಯನಿರತವಾಗಿದ್ದವು, ಆರಕ್ಷಕರು, ಮಿಲಿಟರಿಯವರು ಹಾಗೂ ಸ್ವಯಂಸೇವಕರು ಬಿರುಸಿನಿಂದ ಅವಶೇಷಗಳ ಮಧ್ಯೆ ಸಿಲುಕಿಕೊಂಡ ಜನರ ಶೋಧಕಾರ್ಯ ನಡೆಸುತ್ತಿದ್ದರು. ಕಟ್ಟಡಗಳ ಭಗ್ನಾವಶೇಷಗಳನ್ನೆಲ್ಲಾ ಟ್ರಕ್ಕುಗಳಲ್ಲಿ ತುಂಬಿಸಿ ಬೇರೆಡೆಗೆ ಒಯ್ಯಲಾಗುತ್ತಿತ್ತು. ಅದೆಷ್ಟೋ ಕಳೇಬರಗಳನ್ನು ಎಳೆದು ಹಾಕಲಾಗಿತ್ತು. ಅಷ್ಟರಲ್ಲಿ ಅದೆಲ್ಲಿಂದಲೋ ಅವಶೇಷಗಳೆಡೆಯಿಂದ 'ಡ್ಯಾಡ್...' ಎಂಬ ಆಕ್ರಂದನ ಜಿತೇಂದ್ರನ ಕಿವಿಗೆ ಬಿತ್ತು. ಬಹಳ ಕ್ಷೀಣವಾಗಿತ್ತು ಆ ಧ್ವನಿ. ಅಲ್ಲಿ ಯಾರೋ ಒಬ್ಬರು ಜೀವಂತವಾಗಿದ್ದಾರೆ ಎಂಬ ಅನುಮಾನ ಬಂತು ಅವನಿಗೆ. ಅವನು ಕೂಡಲೇ ಇತರರನ್ನು ಸಹಾಯಕ್ಕೆ ಕರೆದ. ಆ ಆರ್ತನಾದ ಎಲ್ಲಿಂದ ಕೇಳಿಬಂತೋ ಅಲ್ಲಿಗೆ ಧಾವಿಸಿದರು ಅವರೆಲ್ಲ. ಮತ್ತೆ ಸ್ವರವೇ ಕೇಳಿಸದಿದ್ದಾಗ ಜಿತೇಂದ್ರನಿಗೆ ಆತಂಕ ಉಂಟಾಯಿತು. ಎಲ್ಲರೂ ಸೇರಿ ಹುಡುಕಿದರು. ಕಲ್ಲು ಹೆಂಟೆಗಳು, ಕಬ್ಬಿಣದ ಸರಳುಗಳು, ಮರದ ಹಲಗೆಗಳು, ಗಾಜಿನ ತುಂಡುಗಳು ಎಲ್ಲವನ್ನೂ ಮೆತ್ತಗೆ ಎತ್ತಿ ಸರಿಸಿ ಹುಡುಕಿದ್ದೇ ಹುಡುಕಿದ್ದು. ಸ್ವಲ್ಪ ಹೊತ್ತಿನ ನಂತರ ಸಿಮೆಂಟ್ ಸ್ಲಾಬ್ ಒಂದರ ಕೆಳಗಡೆ ಅರೆಪ್ರಜ್ಞಾವಸ್ಥೆಯಲ್ಲಿದ್ದ ಮಗುವೊಂದು ಕಾಣಿಸಿತು. ಹೇಗೆ ಹೊರತೆಗೆಯುವುದು ಮಗುವನ್ನು? ಚಪ್ಪಡಿ ಸ್ವಲ್ಪ ಅಲ್ಲಾಡಿದರೂ ಮಗುವಿನ ಮೇಲೆ ಬಿದ್ದುಬಿಟ್ಟರೆ ಎಂಬ ಭಯ. ಎಲ್ಲರೂ ಸೇರಿ ಜಾಗರೂಕತೆಯಿಂದ ಸಿಮೆಂಟ್ ಚಪ್ಪಡಿಯನ್ನು ಸರಿಸಿದರು. ಗುಂಗುರು ಕೂದಲು, ಅಂದದ ಮುಖ, ಗೌರವರ್ಣದ ಗಂಡು ಮಗು ಬಹಳ ಮುದ್ದಾಗಿತ್ತು. ಎರಡು ವರ್ಷ ವಯಸ್ಸಿರಬಹುದು ಮಗುವಿಗೆ. ಮೈ ಮೇಲೆ ಬಿದ್ದಿದ್ದ ಮಣ್ಣಿನಿಂದಾಗಿ ಮಗುವಿನ ತಲೆ, ಮೈ, ಹಾಕಿಕೊಂಡಿದ್ದ ಕೆನೆಬಣ್ಣದ ಉಡುಪು ಎಲ್ಲ ಮಲಿನವಾಗಿತ್ತು. ಅಲ್ಲೇ ಇದ್ದ ವೈದ್ಯರಿಂದ ಪ್ರಥಮ ಚಿಕಿತ್ಸೆ ಕೊಡಿಸಲಾಯಿತು. ಮಗುವಿಗೆ ಪ್ರಜ್ಞೆ ಮರುಕಳಿಸಿತು. ಕಣ್ಣುಬಿಟ್ಟು ಸುತ್ತಲೂ ನೋಡಿತು.

'ಭಾರತೀಯ ಮೂಲದ್ದು ಕಣ್ರೀ ಮಗು!' ಉದ್ಗರಿಸಿದ ಒಬ್ಬ. ಉಳಿದವರೆಲ್ಲ ಹೌದೆಂದು ತಲೆದೂಗಿದರು.

'ಕಣ್ಣು ಮುಖ ನೋಡುವಾಗಲೇ ಗೊತ್ತಾಗತ್ತೆ ಅದೆಲ್ಲ. ಅಂತೂ ಮಗು ಬದುಕಿ ಉಳಿಯಿತಲ್ಲ!' ಜಿತೇಂದ್ರ ಸಂತಸ ವ್ಯಕ್ತಪಡಿಸಿದ.

'ಮಗು ಹಸಿವಿನಿಂದ ಸೊರಗಿದೆ; ಅದಕ್ಕೇನಾದರೂ ತಿನ್ನಿಸಿ' ಡಾಕ್ಟರ್ ಸಲಹೆಯಿತ್ತರು.

ಮಹಿಳೆಯೊಬ್ಬಳು ಮುಂದೆ ಬಂದು ಮಗುವಿಗೆ ಬಿಸ್ಕತ್ತು ತಿನ್ನಿಸಿ ಹಾಲು ಕುಡಿಸಿದಳು. ಸ್ವಲ್ಪ ಚೈತನ್ಯ ಬಂದಂತಾದ ಕೂಡಲೇ ಮಗು ಪುನಃ ತನ್ನ ಬಟ್ಟಲುಗಣ್ಣುಗಳನ್ನು ಅರಳಿಸಿ ಸುತ್ತಲೂ ನೋಡಿತು. ಅಷ್ಟು ಜನರ ಮಧ್ಯೆ ಹುಡುಕಿ ಜಿತೇಂದ್ರನನ್ನೇ ನೋಡಿ 'ಡ್ಯಾಡ್...' ಎಂದು ಕರೆಯಿತು; 'ಇಲ್ಲಿ ಬಾ' ಎಂದು ಸನ್ನೆ ಮಾಡಿತು.

'ಈ ಮಗುವಿನ ಹೆತ್ತವರು ಎಲ್ಲಿದ್ದಾರೋ! ಬದುಕುಳಿದಿದ್ದಾರೋ ಇಲ್ಲವೋ

## ತಿರುಗುಬಾಣ

ನಾನು ತರಗತಿಯ ಒಳಗೆ ಹೋದ ಮೇಲೆ
'ಯಾರು ಬಂದರೂ ಸೇರಿಸುವುದಿಲ್ಲ'
ಗುರುಗಳು ಗಟ್ಟಿದನಿಯಲ್ಲಿ ಪ್ರಕಟಿಸಿದರು.
ಮಾರನೇ ದಿನ..
ಗುರುಗಳು ತರಗತಿ ಒಳಗೆ ಹೋದರು
ಹುಡುಗರು ಯಾರೂ ಒಳಗೆ ಹೋಗಲಿಲ್ಲ!

★ ದೊಡ್ಡರಂಗೇಗೌಡ

